

ಚೆಲ್ಲಿದ್ದವು. ಕಾಲನ್ನು ನಿಡಿದಾಗಿ ಚಾಚಲು ಕೂಡ ಗಫಾರ್‌ಗೆ ಅವಕಾಶ ಇರಲಿಲ್ಲ. ಅವನು ಮನೆಯಿಂದ ಹೊರಡಬೇಕಾದಲ್ಲಿ ಸುಮ್ಮನೆ ಒಂದು ದೃಷ್ಟಿಯನ್ನು ಹಾಫಿಜಾ ಮೇಲೆ ಚೆಲ್ಲಿದ. ತಲೆಯ ಮೇಲೆ ಸೆರಗನ್ನು ಹೊದ್ದುಕೊಂಡು, ಮನೆಯ ಹೆಬ್ಬಾಗಿಲಿನ ಹಿಂದೆ ಬಂದು ನಿಂತುಕೊಂಡ ಅವಳನ್ನು ಹೆಚ್ಚು ಹೊತ್ತು ನೋಡಲು ಕೂಡಾ ಅವನಿಗೆ ಸಾಧ್ಯವಾಗಿರಲಿಲ್ಲ. ಆಕೆಯನ್ನು ಒಂದು ಗಳಿಗೆ ಕಣ್ಣು ತುಂಬಾ ತುಂಬಿಕೊಂಡು ಬಿಡುಬೀಸಾಗಿ ನಡೆದು ಬಂದಿದ್ದಷ್ಟೆ! ಅಲ್ಲಿದ್ದ ಅನೇಕ ಹಿರಿಯ ಸಂಬಂಧಿಗಳ ಎದುರಿಗೆ 'ಹೋಗಿ ಬರುತ್ತೇನೆ' ಎಂದು ಅವಳಿಗೆ ಹೇಳಲು ಕೂಡ ಅವನಿಗೆ ಸಾಧ್ಯ ಇರಲಿಲ್ಲ. 'ಹೋಗಿ ಬನ್ನಿ, ಖುದಾ ಹಾಫಿಜ್' ಎಂದು ಹೇಳಲು ಆಕೆಗೂ ಅವಕಾಶ ಇರಲಿಲ್ಲ. ಅವಳ ಮಾತುಗಳು ಗಂಟಲಲ್ಲೆ ಉಳಿದವು. ಅವಳ ಹಾರೈಕೆ ಕಣ್ಣುಗಳಲ್ಲಿ ಮಾತ್ರ ವ್ಯಕ್ತವಾದವು.

ಸಯ್ಯದ್ ಗಫಾರ್ ನಿಧಾನವಾಗಿ ಕಣ್ಣು ಮುಚ್ಚಿದ. ನಿದ್ರೆಯ ಆಳಕ್ಕೆ ಜಾರಿದಾಗ ನಿದ್ರಾ ದೇವಿ ಆವರಿಸಿಬಿಟ್ಟಿದ್ದಳು. ಗಾಡಿಯ ಕುಲುಕಾಟದಲ್ಲೂ ಪ್ರಯಾಣ ಮುಂದುವರೆಯಿತು. ಹಾಸನದಿಂದ ಹೊರಟ ಆ ಗಾಡಿಗಳು ದುದ್ದದ ಸೇತುವೆಯ ಮೇಲೆ ಬಂದಾಗ ಎಲ್ಲಾ ಗಾಡಿಗಳು ಕೂಡ ಯಥಾಪ್ರಕಾರ ಮುಂದುವರೆಯುತ್ತಿದ್ದವು. ಮಧ್ಯದಲ್ಲಿದ್ದ ಸಯ್ಯದ್ ಗಫಾರ್‌ನ ಗಾಡಿ ಮಾತ್ರ ದುದ್ದದ ಸೇತುವೆ ಮೇಲಿನಿಂದ ಕೆಳಗಡೆ ಮಗುಚಿಕೊಂಡಿತ್ತು. ಎಲ್ಲರೂ ಗಾಡಿಗಳನ್ನು ನಿಲ್ಲಿಸಿ ಹಾಹಾಕಾರ ಮಾಡುತ್ತಾ ದೌಡಾಯಿಸಿದರು. ಅಂತಹ ಭೀಕರ ಸದ್ದು! ಎತ್ತುಗಳು ನೊಗದ ಭಾರಕ್ಕೆ ಮೇಲುಗಣ್ಣು ತೇಲುಗಣ್ಣಾಗಿದ್ದವು. ನೊಗವೆಲ್ಲೊ ಚೆಲ್ಲಾಪಿಲ್ಲಿಯಾಗಿತ್ತು. ಛಿದ್ರಗೊಂಡ ಗಾಡಿಯ ಒಳಗೆ ಕಾಣದ ಸಯ್ಯದ್ ಗಫಾರ್‌ನ ಸಣ್ಣ ನರಳಿಕೆ ಕ್ಷೀಣವಾಗಿ ಕೇಳಿಬರುತಿತ್ತು. 'ಓಹೊ ಗಫಾರ್ ಇಲ್ಲಿದ್ದಾನೆ... ಇಲ್ಲಿದ್ದಾನೆ' ಎಂದು ಅವನ ಸಹ ಪ್ರಯಾಣಿಕರು ಅವನ ಇರುವನ್ನು ಕಂಡು ಗೆಲುವಾದರು. ಹಣ್ಣುಗಳ ಅಡಿಯಲ್ಲಿ ಮತ್ತು ಗಾಡಿಯ ಭಾರದ ಅಡಿಯಲ್ಲಿ ಕಾಣೆಯಾಗಿದ್ದ ಆ ಯುವಕನನ್ನು 'ಎಳೆಯಿರಿ, ಗಫಾರ್‌ನನ್ನು ಎಳೆಯಿರಿ' ಎಂದು ಅವನನ್ನು ಅನಾಮತ್ತಾಗಿ ಎಳೆದಾಗ ಸಯ್ಯದ್ ಗಫಾರ್ ಅವರೆಲ್ಲರನ್ನೂ ಒಮ್ಮೆ ನೋಡಿದ. ರಕ್ತಸಿಕ್ತನಾಗಿದ್ದ ಅವನ ಬಾಯಿಗೆ ಯಾರೋ ನೀರು ಬಿಟ್ಟರು. ಸಯ್ಯದ್ ಗಫಾರ್‌ನ ಪ್ರಾಣ ಪಕ್ಷಿ ಹಾರಿಹೋಗಿತ್ತು.

ಸುದ್ದಿ ಬಂದಾಗ ಹಾಸನದ ಮನೆಯಲ್ಲಿ ಎಲ್ಲರೂ ಸುಖದ ನಿದ್ರೆಯಲ್ಲಿ ಇದ್ದರು. ಆಂಟಿ ತನ್ನ ಪತಿಯ ಸಾವಿನ ದುರಂತದ ಪರಿಣಾಮಗಳನ್ನು ಕೂಡ ಅರಿಯದ ವಯಸ್ಸಿನ ಮುಗ್ಧೆಯಾಗಿದ್ದಳು. ಸಂದೇಶ ಹೊತ್ತು ತಂದವನ ಹೃದಯ ವಿದ್ರಾವಕ ಚೀತ್ಕಾರ ಇಡೀ